6. ಮುಖ್ಯವಾಗಿ ಮೋರಿಗಳಲ್ಲಿ ಕಸ ತೆಗೆದು ನೀರು ಸರಾಗವಾಗಿ ಹೋಗಲು ಅನುಕೂಲ ಮಾಡಿ ಸೊಳ್ಳೆಗಳ ಉತ್ಪತ್ತಿಗೆ ತಡೆಹಾಕಲಾಗಿದೆ.
7. ಕೆರೆಗಳಲ್ಲಿದ್ದ ನೀರನ್ನು ಕೋಡಿ ಹೊಡೆದು ಹೊರಹಾಕಿ ಸೊಳ್ಳೆ ಉತ್ಪತ್ತಿಯನ್ನು ಆ ಜಾಗ ಗಳಲ್ಲಿ ಕಡಿಮೆ ಮಾಡಲಾಗಿದೆ.
ಸೊಳ್ಳೆ ನಿಯಂತ್ರಣಕ್ಕೆ 83-84 (ಎಪ್ರಿಲ್‌ನಿಂದ ಜೂನ್‌ರವರೆವಿಗೆ) 8 ಲಕ್ಷ ರೂ. ಗಳನ್ನು ಖರ್ಚು ಮಾಡಲಾಗಿದೆ.

ಈ. ಈ ವಿಷಯವನ್ನು ಪರಿಶೀಲಿಸಲಾಗುತ್ತಿದೆ.

Sri A. Lakshmisagar.—(Hon'ble Minister for Law, Parliamentary Affairs. & Public grievances): Sir, I beg to lay on the table of the House Questions for Written Answers- 11th list.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನಿಡಲಾದ ಲಿಖಿತ ಉತ್ತರಗಳು

**ವಿಷಯ :—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆಯ ಅಭಾವದಿಂದ ಆಹಾರ ಮತ್ತು ಇತರೆ ವಾಣಿಜ್ಯ ಬೆಳೆಗಳಿಗೆ ಹಾನಿಯುಂಟಾದ ಬಗ್ಗೆ.**

ಪ್ರ. 78(41) ಶ್ರೀ ಕೆ ರಾಮಭಟ್ (ಪುತ್ತೂರು).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆಯ ಅಭಾವದಿಂದಾಗಿ ಆಹಾರ ಮತ್ತು ಇತರ ವಾಣಿಜ್ಯ ಬೆಳೆಗಳಿಗೆ 1982-83, ಮತ್ತು 1983-84 ವರ್ಷಗಳಲ್ಲಿ ಗಣನೀಯ ಪ್ರಮಾಣದಲ್ಲಿ ಹಾನಿ ವುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;
ಆ. ಹಾಗಿದ್ದಲ್ಲಿ ಅದರ ಪ್ರಮಾಣವೆಷ್ಟು ?
ಇ. ಈ ಹಿನ್ನೆಲೆಯಲ್ಲಿ ಸರ್ಕಾರದವರು ರೈತರಿಗೆ ಅನುಕೂಲತೆಗಳನ್ನು ಒದಗಿಸಿದ್ದಾರೆಯೆ ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು) :—

ಅ. ದಕ್ಷಿಣ ಕನ್ನಡ ಜಿಲ್ಲೆಯನ್ನು 1982-83 ಮತ್ತು 1983-84ಯಲ್ಲಿ ಅಭಾವ ಪೀಡಿತ ಪ್ರದೇಶವೆಂದು ಘೋಷಿಸಲಾಗಿಲ್ಲಾ, ಕಾರಣಾ ಆಹಾರ ಮತ್ತು ವಾಣಿಜ್ಯ ಬೆಳೆಗಳಿಗೆ ಆಹಾರ ಹಾನಿವುಂಟಾಗಿದೆಯೆಂಬ ಪ್ರಶ್ನೆ ಬರುವುದಿಲ್ಲ.
ಆ. ಈ ಪ್ರಶ್ನೆ ಉದ್ಭವಿಸುವುದಿಲ್ಲಾ.
ಇ. ಈ ಪ್ರಶ್ನೆ ಉದ್ಭವಿಸುವುದಿಲ್ಲಾ.

**ವಿಷಯ :—ಗ್ರಾಮ ಸಹಾಯಕರ ಬೇಡಿಕೆಗಳು.**

ಪ್ರ. 79(140) ಶ್ರೀ ಕೆ. ರಾಮಭಟ್ (ಪುತ್ತೂರು).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಕರ್ನಾಟಕ ರಾಜ್ಯದಲ್ಲಿ ಈಗ ಕೆಲಸ ಮಾಡುತ್ತಿರುವ ಗ್ರಾಮ ಸಹಾಯಕರ ಸಂಖ್ಯೆ ಎಷ್ಟು ; ಇವರು ಸರಕಾರಿ ನೌಕರರ ಯಾವ ವರ್ಗಕ್ಕೆ ಸೇರುತ್ತಾರೆ ;
ಆ. ಗ್ರಾಮಸಹಾಯಕರಿಗೆ ಈಗ ಕೊಡುತ್ತಿರುವ ತಿಂಗಳ ವೇತನ ಎಷ್ಟು ;
ಇ. ತಮ್ಮ ವೇತನ ಹೆಚ್ಚಿಸಬೇಕೆಂದು ಮತ್ತು ಇತರ ಬೇಡಿಕೆಗಳನ್ನು ಮುಂದಿಟ್ಟು ಗ್ರಾಮ ಸಹಾಯಕರು ಸರಕಾರಕ್ಕೆ ಮನವಿ ಸಲ್ಲಿಸಿರುತ್ತಾರೆಯೆ ;
ಈ. ಈ ಬೇಡಿಕೆಗಳ ಕುರಿತು ಸರಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು) :—

ಅ. ಕರ್ನಾಟಕ ರಾಜ್ಯದಲ್ಲಿ ಈಗ ಕೆಲಸ ಮಾಡುತ್ತಿರುವ ಗ್ರಾಮ ಸಹಾಯಕರ ಸಂಖ್ಯೆ 9779. ಈ ಹುದ್ದೆಗಳು ಸ್ಟೆಪ್ಪೆಂಡರಿ ಹುದ್ದೆಗಳಾಗಿದ್ದು ಮತ್ತು ಐದು ವರ್ಷಗಳ ಅವಧಿಯ ತಾತ್ಕಾಲಿಕ ಹುದ್ದೆಗಳಾಗಿರುವುದರಿಂದ ಯಾವ ಸರ್ಕಾರಿ ನೌಕರರ ವರ್ಗಕ್ಕೂ ಸೇರುವುದಿಲ್ಲ.
ಆ. ತಿಂಗಳಿಗೆ 120 ರೂಪಾಯಿಗಳ ನಿಗದಿತ ಸಂಭಾವನೆಯನ್ನು ಕೊಡಲಾಗುತ್ತಿದೆ.
ಇ. ಸಲ್ಲಿಸಿರುತ್ತಾರೆ.
ಈ. ಈ ಹುದ್ದೆಗಳು ತಾತ್ಕಾಲಿಕ ಹುದ್ದೆಗಳಾಗಿರುವುದರಿಂದ ಮತ್ತು ಇವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿಲ್ಲವಾದ್ದರಿಂದ ಅವರ ಬೇಡಿಕೆಗಳ ಬಗ್ಗೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

**ವಿಷಯ :—ಸರ್ಕಾರವು ಗ್ರಾಮ ಲೆಕ್ಕಿಗರ ಮೇಲೆ ಜವಾಬ್ದಾರಿಯನ್ನು ನಿಗದಿಪಡಿಸುವ ಬಗ್ಗೆ.**

ಪ್ರ. 80(11) ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಮಾನ್ಯ ಕಂದಾಯ ಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಸರ್ಕಾರವು ಗ್ರಾಮ ಲೆಕ್ಕಿಗರ ಮೇಲೆ ಈ ಕೆಳಕಂಡ ದಾಖಲೆಗಳನ್ನು ನಿರ್ವಹಿಸುವಾಗ ವಿಳಂಬವು ಕಂಡು ಬಂದಲ್ಲಿ ಜವಾಬ್ದಾರಿಯನ್ನು ನಿಗದಿ ಪಡಿಸುವ ವಿಚಾರವನ್ನು ಪರಿಗಣಿಸುವುದೆ ?